ತೆರೆದ–ಅಂಚೆ


# ಸರ್ ಎಂ. ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಛೇರಿ : # 109, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು – 560 004.

ದೂ. : 080–22956419/20 ಇ–ಮೇಲ್ : corporate@vcb.co.in ವೆಬ್‌ಸೈಟ್ : www.vcb.co.in,


## ಆಡಳಿತ ಮಂಡಲಿಯ ಚುನಾವಣೆ ಸೂಚನಾ ಪತ್ರ

**ಮಾನ್ಯ ಸದಸ್ಯರೆ,**

ಸರ್ ಎಂ.ವಿಶ್ವೇಶ್ವರಯ್ಯ ಕೋ ಆಪರೇಟಿವ್ ಬ್ಯಾಂಕ್ ಲಿ ಬೆಂಗಳೂರು ಈ ಸಹಕಾರ ಬ್ಯಾಂಕಿನ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು (ಚುನಾವಣೆ) ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶದನ್ವಯ ಶ್ರೀ ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, 4ನೇ ವಲಯ, ಬೆಂಗಳೂರು ಇವರನ್ನು ಬ್ಯಾಂಕಿನ ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅವರು ಪ್ರಕಟಿಸಿರುವ ಚುನಾವಣಾ ವೇಳಾಪಟ್ಟಿ ಮತ್ತು ಚುನಾವಣಾ ಸೂಚನೆಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ಚುನಾವಣೆಯಲ್ಲಿ ಭಾಗವಹಿಸಿ ತಪ್ಪದೆ ಮತ ಚಲಾಯಿಸಬೇಕಾಗಿ ವಿನಂತಿ.

**ಚುನಾವಣಾ ದಿನಾಂಕ : 12–01–2025, ಭಾನುವಾರ**

ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ

ಸ್ಥಳ : ಶ್ರೀ ಚಂದ್ರಶೇಖರ ಭಾರತೀ ಕಲ್ಯಾಣಮಂಟಪದ ಆವರಣ,

ನಂ. 29/1, ಪಂಪಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು – 560 004.

ರಿಟರ್ನಿಂಗ್ ಅಧಿಕಾರಿ ಅಪ್ಪಣೆ ಮೇರೆಗೆ

ಸಹಿ/–

**(ಬಿ.ಎ. ಶ್ರೀಧರ)**

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಬೆಂಗಳೂರು

ದಿನಾಂಕ : 26/12/2024

---

## ಮಾನ್ಯ ಸದಸ್ಯರ ಗಮನಕ್ಕೆ

1) ಸಹಕಾರ ಚುನಾವಣಾ ಪ್ರಾಧಿಕಾರವು ಅನುಮೋದಿಸಿರುವ ಅರ್ಹ ಮತದಾರರ ಪಟ್ಟಿಯಲ್ಲಿನ ಸದಸ್ಯರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಅರ್ಹರಿರುತ್ತಾರೆ.

2) ಚುನಾವಣೆಗೆ ಸ್ಪರ್ಧಿಸಲಿಚ್ಛಿಸುವ ಮಾನ್ಯ ಸದಸ್ಯರು ನಾಮಪತ್ರಗಳ ನಮೂನೆಯನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಪಡೆಯಬಹುದು.

3) ಚುನಾವಣೆಯಲ್ಲಿ ಭಾಗವಹಿಸಿ ಮತ ಚಲಾಯಿಸಲು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ನಿಯಮ 13ಎ ಅನ್ವಯ ಬ್ಯಾಂಕಿನಿಂದ ವಿತರಿಸಿರುವ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಇದುವರೆವಿಗೂ ಗುರುತಿನ ಚೀಟಿಯನ್ನು ಪಡೆಯದೇ ಇದ್ದಲ್ಲಿ ದಿನಾಂಕ 10.01.2025 ಸಾಯಂಕಾಲ 5.00 ಗಂಟೆಯ ಒಳಗಾಗಿ ತಮ್ಮ ಇತ್ತೀಚಿನ ಬಣ್ಣದ ಪಾಸ್ ಪೋರ್ಟ್ ಅಳತೆಯ ಮೂರು ಭಾವಚಿತ್ರಗಳನ್ನು ನೀಡಿ (Photo) ಗುರುತಿನಚೀಟಿಯನ್ನು ಪ್ರಧಾನ ಕಛೇರಿಯಲ್ಲಿ ಪಡೆಯಬಹುದು.

4) ದಿನಾಂಕ: 27.12.2024 ರಂದು ಪ್ರಧಾನ ಕಛೇರಿಯಲ್ಲಿ ಮತ್ತು ಎಲ್ಲಾ ಶಾಖೆಗಳ ಸೂಚನಾ ಫಲಕದಲ್ಲಿ ಚುನಾವಣಾ ನೋಟಿಸನ್ನು ಸದಸ್ಯರ ಗಮನಕ್ಕಾಗಿ ಪ್ರಕಟಿಸಲಾಗುವುದು. ಬ್ಯಾಂಕಿನ ವೆಬ್‌ಸೈಟ್ www.vcb.co.in ರಲ್ಲೂ ಸಹ ಲಭ್ಯವಿರುತ್ತದೆ.

5) ಸದಸ್ಯರ ವಾಹನ ನಿಲುಗಡೆಗೆ ಶ್ರೀ ರಾಯರಾಯ ಕಲ್ಯಾಣಮಂಟಪ, ಸಂಖ್ಯೆ 88, ಪಂಪಮಹಾಕವಿರಸ್ತೆ, ಶಂಕರಪುರಂ, ಬೆಂಗಳೂರು – 560 004 ಈ ಆವರಣದಲ್ಲಿ ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ.

6) ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಎಲ್ಲಾ ಸದಸ್ಯರ ಸಹಕಾರವನ್ನು ಕೋರುತ್ತೇವೆ.

7) ದಿನಾಂಕ 12.01.2025ರಂದು ಶ್ರೀ ರಾಯರಾಯ ಕಲ್ಯಾಣ ಮಂಟಪದ ಆವರಣದಲ್ಲಿ ಲಘು ಉಪಹಾರವನ್ನು ಬೆಳಗ್ಗೆ 8:30 ರಿಂದ ಸಂಜೆ 4:00 ಗಂಟೆಯವರಗೆ ಏರ್ಪಡಿಸಲಾಗಿದೆ.

| | | |
|---|---|---|
| **ಸಂಪರ್ಕಾಧಿಕಾರಿಗಳು :** | – | **ಸಂಚಾರಿ ದೂರವಾಣಿ ಸಂಖ್ಯೆ** |
| **1) ಶ್ರೀ. ಬಿ.ಎ. ಶ್ರೀಧರ** | – | **94808 85373** |
| **2) ಶ್ರೀ ಎಸ್. ಎಸ್. ರಾಜೇಂದ್ರ** | – | **94800 47850** |
| **3) ಶ್ರೀ ಆರ್. ಅಶ್ವತನಾರಾಯಣ** | – | **97405 16973** |

**ನಮೂನೆ – XII**

**ನಿಯಮ-14 (3)**

**ಚುನಾವಣಾ ನೋಟಿಸು**

ಸರ್ ಎಂ ವಿಶ್ವೇಶ್ವರಯ್ಯ ಕೋ-ಅಪರೇಟಿವ್ ಬ್ಯಾಂಕ್ ಲಿ., ಶಂಕರ ಮಠ ರಸ್ತೆ, ಶಂಕರಪುರಂ, ಬೆಂಗಳೂರು–560004

ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪ್ರಭಾರ) ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ: ಸಚುಪ್ರಾ/ಬೆಂ/ಜಂ.ನಿ/ಆಮಂಚು–ರಿಆನೇ/52/2024–25 ದಿನಾಂಕ:21–11–2024ರ ಮೇರೆಗೆ ಸರ್ ಎಂ ವಿಶ್ವೇಶ್ವರಯ್ಯ ಕೋ–ಅಪರೇಟಿವ್ ಬ್ಯಾಂಕ್ ಲಿ., ಶಂಕರ ಮಠ ರಸ್ತೆ, ಶಂಕರಪುರಂ, ಬೆಂಗಳೂರು–560004, ಇದರ ರಿಟರ್ನಿಂಗ್ ಅಧಿಕಾರಿಯಾಗಿ ನೇಮಕಾತಿ ಹೊಂದಿರುವ ನಾನು ಕ.ಸ.ಸಂ. ಕಾಯ್ದೆ 1959 ಹಾಗೂ ನಿಯಮಗಳು 1960 ರ ನಿಯಮ 14ರ ಪ್ರಕಾರ ಆಡಳಿತ ಮಂಡಲಿಯ ಚುನಾವಣೆಯನ್ನು ದಿನಾಂಕ:12–01–2025 ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ ಶ್ರೀ ಚಂದ್ರಶೇಖರ ಭಾರತಿ ಕಲ್ಯಾಣ ಮಂಟಪ, ನಂ.29/1, ಪಂಪಾ ಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು–560004 ಈ ಸ್ಥಳದಲ್ಲಿ ನಡೆಸಲಾಗುವುದು. ಚುನಾವಣಾ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

## -: ಚುನಾವಣಾ ವೇಳಾಪಟ್ಟಿ :-

| ಕ್ರ. ಸಂ | ಚುನಾವಣಾ ಕಾರ್ಯಸೂಚಿ | ದಿನಾಂಕ/ವಾರ/ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 1. | ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ ಮತ್ತು ವೇಳೆ | ದಿನಾಂಕ: 01-01-2025ರ ಬುಧವಾರ ಬೆಳಿಗ್ಗೆ 11.00 ರಿಂದ 3.00 ಗಂಟೆಯವರೆಗೆ | 14(ಎ) | ಬ್ಯಾಂಕ್‌ನ ಕಛೇರಿಯ ಆವರಣದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 2. | ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ | ದಿನಾಂಕ: 04-01-2025 ಶನಿವಾರ ಬೆಳಿಗ್ಗೆ 11.00 ರಿಂದ 3.00 ಗಂಟೆಯವರೆಗೆ | 14(ಎ) | ಬ್ಯಾಂಕ್‌ನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 3. | ನಾಮಪತ್ರಗಳ ಪರಿಶೀಲನೆ. | ದಿನಾಂಕ: 05-01-2025 ಭಾನುವಾರ ಬೆಳಿಗ್ಗೆ 12.00 ಗಂಟೆಗೆ | 14(ಬಿ) | ಬ್ಯಾಂಕ್‌ನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 4. | ಅರ್ಹ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ. | ದಿನಾಂಕ: 05-01-2025 ಭಾನುವಾರ ಪರಿಶೀಲನೆ ನಂತರ. | 14ಬಿ(4) | ಸಂಘದ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 5. | ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ವೇಳೆ | ದಿನಾಂಕ: 06-01-2025 ಸೋಮವಾರ ಮಧ್ಯಾಹ್ನ:03:00 ಗಂಟೆಯವರೆಗೆ | 14(ಸಿ) | ಬ್ಯಾಂಕ್‌ನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 6. | ಉಮೇದುವಾರಿಕೆ ಅರ್ಜಿ ಮತ್ತು ನಾಮಪತ್ರಗಳನ್ನು ವಾಪಸ್ಸು ಪಡೆದವರ ಪಟ್ಟಿ ಪ್ರಕಟಣೆ | ದಿನಾಂಕ: 06-01-2025 ಸೋಮವಾರ ಮಧ್ಯಾಹ್ನ:03:00 ಗಂಟೆಯ ನಂತರ | - | ಬ್ಯಾಂಕ್‌ನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 7. | ಅಂತಿಮವಾಗಿ ಚುನಾವಣೆಯಲ್ಲಿ ಉಳಿದ ಉಮೇದುವಾರರ ಪಟ್ಟಿ ಪ್ರಕಟಣೆ | ದಿನಾಂಕ: 06-01-2025 ಸೋಮವಾರ ಮಧ್ಯಾಹ್ನ:03:00 ಗಂಟೆಯ ನಂತರ | 14(ಡಿ) | ಬ್ಯಾಂಕ್‌ನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 8. | ಅಗತ್ಯವಾದಲ್ಲಿ ಉಮೇದುವಾರರಿಗೆ ಚುನಾವಣಾ ಚಿಹ್ನೆಗಳ ಹಂಚಿಕೆ | ದಿನಾಂಕ: 06-01-2025 ಸೋಮವಾರ ಮಧ್ಯಾಹ್ನ:03:00 ಗಂಟೆಯ ನಂತರ | 14(ಇ) | ಬ್ಯಾಂಕ್‌ನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 9. | ಚುನಾವಣಾ ಚಿಹ್ನೆಯೊಂದಿಗೆ ಮಾದರಿ ಮತಪತ್ರ ಪ್ರಕಟಣೆ | ದಿನಾಂಕ: 08-01-2025 ಬುಧವಾರ ಮಧ್ಯಾಹ್ನ 1:00 ಗಂಟೆಯ ನಂತರ | - | ಬ್ಯಾಂಕ್‌ನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 10. | ಚುನಾವಣೆ ನಡೆಸಲು ಚುನಾವಣಾ ದಿನಾಂಕ ಮತ್ತು ವೇಳೆ | ದಿನಾಂಕ: 12-01-2025 ಭಾನುವಾರ ಬೆಳಿಗ್ಗೆ 09.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ | - | ಶ್ರೀ ಚಂದ್ರಶೇಖರ ಭಾರತಿ ಕಲ್ಯಾಣ ಮಂಟಪ, ನಂ.29/1, ಪಂಪಾ ಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು-560004 |
| 11. | ಮತ ಎಣಿಕೆಯ ದಿನ ಮತ್ತು ದಿನಾಂಕ ಮತ್ತು ವೇಳೆ | ದಿನಾಂಕ: 12-01-2025 ಭಾನುವಾರ ಮಧ್ಯಾಹ್ನ 4.00 ಗಂಟೆಯ ನಂತರ | - | ಶ್ರೀ ಚಂದ್ರಶೇಖರ ಭಾರತಿ ಕಲ್ಯಾಣ ಮಂಟಪ, ನಂ.29/1, ಪಂಪಾ ಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು-560004 |
| 12. | ಚುನಾವಣಾ ಅಧಿಕಾರಿಗಳಿಂದ ಫಲಿತಾಂಶ ಪ್ರಕಟಣೆ | ಮತ ಎಣಿಕೆಯ ನಂತರ | - | ರಿಟರ್ನಿಂಗ್ ಅಧಿಕಾರಿಗಳಿಂದ |

ಸಹಕಾರ ಬ್ಯಾಂಕಿನ ಉಪ ನಿಯಮ ಸಂಖ್ಯೆ 50 ರಂತೆ ಹಾಗೂ ಕರ್ನಾಟಕ ಸಹಕಾರ ಸಂಘದ ಕಾಯ್ದೆ ಮತ್ತು ನಿಯಮಗಳಂತೆ ಒಟ್ಟು ಆಯ್ಕೆಯಾಗಬೇಕಾದ ಸದಸ್ಯರ ಸಂಖ್ಯೆ :19 ಈ ಸ್ಥಾನಗಳು.

ಈ ಸ್ಥಾನಗಳ ಪೈಕಿ

(ಎ) ಸಾಮಾನ್ಯ ಸ್ಥಾನಗಳು–13 (ಹದಿಮೂರು)

(ಬಿ) ಮಹಿಳಾ ಮೀಸಲು ಸ್ಥಾನಗಳು–2 (ಎರಡು)

(ಸಿ) ಹಿಂದುಳಿದ ವರ್ಗದ ಪ್ರವರ್ಗ'ಎ' ವರ್ಗದ ಸದಸ್ಯರಿಗಾಗಿ ಮೀಸಲು ಸ್ಥಾನ–1 (ಒಂದು)

(ಡಿ) ಹಿಂದುಳಿದ ವರ್ಗದ ಪ್ರವರ್ಗ'ಬಿ' ವರ್ಗದ ಸದಸ್ಯರಿಗಾಗಿ ಮೀಸಲು ಸ್ಥಾನ–1 (ಒಂದು)

(ಇ) ಪರಿಶಿಷ್ಟ ಜಾತಿ ಮೀಸಲು ಸ್ಥಾನ–1 (ಒಂದು)

(ಎಫ್) ಪರಿಶಿಷ್ಟ ಪಂಗಡ ಮೀಸಲು ಸ್ಥಾನ–1 (ಒಂದು)

**ವಿವರಣೆ:** ಪ್ರವರ್ಗ'ಎ' ಮತ್ತು ಪ್ರವರ್ಗ'ಬಿ'ಯನ್ನು ಒಳಗೊಂಡ ಹಿಂದುಳಿದ ವರ್ಗಗಳು ಎಂದರೆ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದಲ್ಲಿ ನಿರ್ಧಿಷ್ಟಪಡಿಸಿದ ಪ್ರವರ್ಗಗಳು.

**–:ಸೂಚನೆಗಳು:–**

1. ಉಮೇದುವಾರಿಕೆಯ ನಾಮ ನಿರ್ದೇಶನ ಪತ್ರ ಹಾಗೂ ಹಿಂದಕ್ಕೆ ಪಡೆಯುವ ಪತ್ರಗಳನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಮುಖ್ಯಕಾರ್ಯನಿರ್ವಾಹಕರಿಂದ ಪಡೆಯುವುದು.
2. ಚುನಾವಣೆಗೆ ಅವಶ್ಯವಿರುವಎಲ್ಲ ವಿಧವಾದ ಮಾಹಿತಿಯನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಮುಖ್ಯಕಾರ್ಯನಿರ್ವಾಹಕರಿಂದ ಪಡೆಯುವುದು.
3. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 20(2)(ಎ)(1) ರನ್ವಯ ಸುಸ್ತಿದಾರ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ. ಮತ್ತು ಅಂಥಹ ಸದಸ್ಯರು ಉಮೇದುವಾರಿಕೆಯನ್ನು ಸಲ್ಲಿಸಲು ಅರ್ಹರಿರುವುದಿಲ್ಲ.
4. ಕಲಂ 20(2)(ಎiii) ರನ್ವಯ ಚುನಾವಣೆ ಜರುಗುವ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗೆ ಸದಸ್ಯತ್ವವನ್ನು ಪಡೆದುಕೊಂಡಂತಹ ಸದಸ್ಯರುಗಳಿಗೆ ಚುನಾವಣೆಯಲ್ಲಿ ಭಾಗವಹಿಸಲು ಮತದಾನ ಮಾಡಲು ಹಾಗೂ ಉಮೇದುವಾರಿಕೆಗೆ ಅರ್ಹತೆ ಇರುವುದಿಲ್ಲ.
5. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ–14(ಎ) ಮೇರೆಗೆ ಒಬ್ಬ ಉಮೇದುವಾರರು ಒಂದೇ ಮತಕ್ಷೇತ್ರದಿಂದ ಸ್ಪರ್ಧಿಸತಕ್ಕದ್ದು. ಅದೇ ರೀತಿ ಒಬ್ಬ ಮತದಾನದ ಹಕ್ಕುಳ್ಳ ಸದಸ್ಯ ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದಲ್ಲ.
6. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ–14(ಬಿ) ರ ಮೇರೆಗೆ ಅಭ್ಯರ್ಥಿಗಳು ಅಥವಾ ಅವರ ಸೂಚಕರು ಮಾತ್ರ ನಾಮಪತ್ರಗಳ ಪರಿಶೀಲನೆಯ ಸಮಯದಲ್ಲಿ ಹಾಜರಿರತಕ್ಕದ್ದು.
7. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಸ್ಥಾನಗಳಿಗೆ ಸ್ಪರ್ಧಿಸುವಂತಹ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ನೀಡಿರುವಂತಹ ಸಿಂಧುತ್ವವುಳ್ಳ ಜಾತಿಯ ಪ್ರಮಾಣ ಪತ್ರವನ್ನು ನಾಮಪತ್ರದ ಜೊತೆಗೆ ಲಗತ್ತಿಸತಕ್ಕದ್ದು.
8. ಚುನಾವಣೆಗೆ ಸ್ಪರ್ದಿಸಲು ಬಯಸುವ ಉಮೇದುವಾರರು ಕ.ಸ.ಸಂ. ನಿಯಮಗಳು 1960ರ ನಿಯಮ 14–ಎ (3) ರ ಮೇರೆಗೆ ರೂ.2000/– ಚುನಾವಣಾ ಠೇವಣಿಯನ್ನು ಬ್ಯಾಂಕಿಗೆ ಜಮಾ ಮಾಡಿ ಮೂಲ ರಶೀದಿಯೊಂದಿಗೆ ತಮ್ಮ ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸತಕ್ಕದ್ದು ಪ.ಜಾ/ಪ.ಪಂ., ಹಿಂದುಳಿದ ವರ್ಗ ಹಾಗೂ ಮಹಿಳಾ ಉಮೇದುವಾರರಿಗೆ ಸದರಿ ಠೇವಣಿಯಲ್ಲಿ ಶೇಕಡಾ 50% ರಿಯಾಯತಿ ಇರುತ್ತದೆ.
9. ಚುನಾವಣೆಗೆ ಸ್ಪರ್ದಿಸಲು ಬಯಸುವ ಉಮೇದುವಾರರು ಕ.ಸ.ಸಂ. ನಿಯಮಗಳು 1960ರ ನಿಯಮ 14–ಎ (4) ರನ್ವಯ ಅಭ್ಯರ್ಥಿ ಹಾಗೂ ಅವರ ಸೂಚಕರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಹೇಗೆ ನಮೂದಿತವಾಗಿವೆಯೋ ಹಾಗೆಯೇ ನಾಮಪತ್ರದಲ್ಲಿ ನಮೂದಿಸತಕ್ಕದ್ದು.
10. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14–ಸಿ ರ ಉಪಬಂಧಗಳನ್ವಯ ನಾಮ ಪತ್ರಗಳನ್ನು ಹಾಗೂ ನಾಮ ಪತ್ರವನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೋಟೀಸನ್ನು ಅಭ್ಯರ್ಥಿಗಳು ಬ್ಯಾಂಕಿಗೆ ಖುದ್ದು ಹಾಜರಾಗಿ ರಿಟರ್ನಿಂಗ್ ಅಧಿಕಾರಿಯವರಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಸಲ್ಲಿಸುವುದು. ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲು ಅರ್ಜಿಯನ್ನು ಸಲ್ಲಿಸಿದ ನಂತರ ಅಭ್ಯರ್ಥಿಗೆ ಅದನ್ನು ಯಾವುದೇ ಕಾರಣಕ್ಕೂ ಹಿಂಪಡೆಯಲು ಅಥವಾ ರದ್ದುಪಡಿಸಲು ಅವಕಾಶ ಇರುವುದಿಲ್ಲ.
11. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14–ಇ(1) ರನ್ವಯ ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. "ಮಾನ್ಯ ಮಾಡಿರುವ ರಾಜಕೀಯ ಪಕ್ಷ" ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಹಾಗೂ ಹಂಚಿಕೆ) ಆದೇಶ, 1968ರಡಿ ಭಾರತದ ಚುನಾವಣಾ [ಪ್ರಾಧಿಕಾರ]ದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷಎಂದು ಗುರುತಿಸಲ್ಪಟ್ಟ ಪ್ರತಿಯೊಂದು ರಾಜಕೀಯ ಪಕ್ಷ.
12. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14–ಎಇ (4) ರನ್ವಯ ಯಾವುದೇ ಉಮೇದುವಾರರು (ಅಭ್ಯರ್ಥಿಗಳು) ಚುನಾವಣೆಯಲ್ಲಿ ಚುನಾಯಿಸುವ ಒಟ್ಟು ಮತಗಳ ಪೈಕಿ ಪಜಾ/ಪಪಂ., ಮಹಿಳಾ ಹಾಗೂ ಹಿಂದುಳಿದವರು 1/10 ರಷ್ಟು ಹಾಗೂ ಇತರರು 1/6 ಮತಗಳನ್ನು ಪಡೆಯದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಠೇವಣಿಯನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
13. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 13(ಎ) ರನ್ವಯ ಬ್ಯಾಂಕಿನಿಂದ ನೀಡಿದ ಗುರುತಿನ ಚೀಟಿ (Identity Card) ಮತದಾನಕ್ಕೆ ಕಡ್ಡಾಯವಿದ್ದು, ಮತದಾನದ ಸಮಯದಲ್ಲಿ ಗುರುತಿನ ಚೀಟಿಯನ್ನು ಹಾಜರಪಡಿಸತಕ್ಕದ್ದು. ತಪ್ಪಿದಲ್ಲಿ ಮತದಾನಕ್ಕೆ ಅವಕಾಶ ಕೊಡಲಾಗುವುದಿಲ್ಲ.
14. ಮತದಾನ ಪೂರ್ವದಲ್ಲಿ ಮತಗಟ್ಟೆಯಲ್ಲಿ ಇಟ್ಟಿರುವ ಪುಸ್ತಕದಲ್ಲಿ ಸಹಿ ಮಾಡಿದ ನಂತರ ಮತ ಕೇಂದ್ರದಲ್ಲಿ ಕೊಡುವ ಗುರುತಿನ ಚೀಟಿಯನ್ನು ಪಡೆಯುವುದು ಸಹ ಕಡ್ಡಾಯವಾಗಿರುತ್ತದೆ.
15. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ13–ಇ(2)(iii)ರನ್ವಯ ಸದರಿ ಚುನಾವಣಾ ವೇಳಾಪಟ್ಟಿಯನ್ನು ಪ್ರಚಲಿತದಲ್ಲಿರುವ ದಿನಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು ಹಾಗೂ ಎಲ್ಲಾ ಅರ್ಹ ಸದಸ್ಯರಿಗೆ ಕಡ್ಡಾಯವಾಗಿ ಕಳುಹಿಸತಕ್ಕದ್ದು.
16. ಚುನಾವಣಾ ನಾಮಪತ್ರ ಸಲ್ಲಿಸುವ ದಿನದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಂದೂ ಸಹ ಬ್ಯಾಂಕಿನ ಪ್ರಧಾನ ಕಛೇರಿ ತೆರೆದಿರುತ್ತದೆ.
17. ಎಲ್ಲಾ ಅರ್ಹ ಸದರಸ್ಯರು ಕಡ್ಡಾಯವಾಗಿ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು.

ಸಹಿ/–

**(ಚಂದ್ರಶೇಖರ್.ಎನ್)**

ರಿಟರ್ನಿಂಗ್ ಅಧಿಕಾರಿ

ಸರ್ ಎಂ. ವಿಶ್ವೇಶ್ವರಯ್ಯ ಕೋ–ಅಪರೇಟಿವ್ ಬ್ಯಾಂಕ್ ಲಿ.,

ಶಂಕರ ಮಠ ರಸ್ತೆ, ಶಂಕರಪುರಂ, ಬೆಂಗಳೂರು–560004

ಹಾಗೂ ಸಹಕಾರ ಅಭಿವೃದಿ ಅಧಿಕಾರಿ,

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ 4ನೇ ವಲಯ, ಬೆಂಗಳೂರು.

ಸ್ಥಳ: ಬೆಂಗಳೂರು

ದಿನಾಂಕ: 26/12/2024

**To, Smt/Sri**

ಪತ್ರ ವಿಲೇವಾರಿಯಾಗದಿದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ ಹಿಂತಿರುಗಿಸಿ

**ಸರ್ ಎಂ. ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

ಪ್ರಧಾನ ಕಛೇರಿ : # 109, ಶಂಕರಮಠದ ರಸ್ತೆ, ಶಂಕರಪುರಂ

ಬೆಂಗಳೂರು – 560 004. ದೂ. : 080–22956419/20